ದಿನಾಂಕ 20-08-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 1ನೇ ಪ್ರತಿವಾದಿ ಪರ ಶ್ರೀ ಬಿ.ಕೆಪಿ., ವಕೀಲರಿಂದಃ-

8. ನಿಪಿ-9ರಲ್ಲಿ ನಮೂದಾಗಿರುವ ಕಾಳಮಾಯ್ಯರವರನ್ನು ಪಾರ್ಟಿಯಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ಅವರನ್ನು ಸೇರಿಸಲು ಮಿಸ್ಟೇಕ್ ಆಗಿದೆ ಎಂದು ನುಡಿಯುತ್ತಾರೆ. ನಿಪಿ-8ರಲ್ಲಿ ನಮೂದಾಗಿರುವ ರಾಜನ ಹೆಂಡತಿ ಮೋರೆ ಕುಟುಂಬದವನ್ನು ಪಾರ್ಟಿಯಾಗಿ ಮಾಡಿದ್ದೀರಾ ಎಂದರೆ ಸಾಕ್ಷಿಯು ಮಾಡಿಲ್ಲ ಎಂದು ನುಡಿಯುತ್ತಾರೆ. ನಿಪಿ-14ರಲ್ಲಿ ನಮೂದಾಗಿರುವ ಚನ್ನಮಾರಯ್ಯ ಬಿನ್ ದೊಡ್ಡಮಾರಯ್ಯರವರನ್ನು ಪಾರ್ಟಿಯಾಗಿ ಮಾಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಪಿ-15 ಪಹಣಿಯಲ್ಲಿ ನಮೂದಾಗಿರುವ ಜಂಟಿ ಖಾತೆದಾರರನ್ನು ಈ ಕೇಸಿನಲ್ಲಿ ಪಾರ್ಟಿಯಾಗಿ ಮಾಡಿಲ್ಲ. ನಿಪಿ-18ರಲ್ಲಿ ನಮೂದಾಗಿರುವ ಕೆ.ಎಂ.ಮುನಿಮಾದೇಗೌಡರವನ್ನು ಸಹ ಈ ಕೇಸಿನಲ್ಲಿ ಪಾರ್ಟಿಯಾಗಿ ಮಾಡಿಲ್ಲ. ಮೇಲೆ ಹೇಳಿದ ಪಹಣಿಯಲ್ಲಿ ನಮೂದಾಗಿರುವವರು ನಮ್ಮ ಕುಟುಂಬದವರಲ್ಲ. ಚನ್ನಮಾರಯ್ಯ ನಮ್ಮ ಕುಟುಂಬದವರು. ದಾವಾ ಸ್ವತ್ತುಗಳು ಚನ್ನಮಾರಯ್ಯನ ಕುಟುಂಬಕ್ಕೆ ಸೇರಿದ ಸ್ವತ್ತುಗಳು ಎಂದು ತೋರಿಸಲು ದಾಖಲೆ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನೀವು ಹಾಜರುಪಡಿಸಿರುವ ಪಹಣಿಗಳಲ್ಲಿ ನಮೂದಾಗಿರುವ ಸ್ವತ್ತುಗಳು ನಿಮ್ಮ ಕುಟುಂಬಕ್ಕೆ ಸೇರಿದವು ಎಂದು ದಾಖಲೆಗಳನ್ನು ಪರಿಶೀಲನೆ ಮಾಡಿದ್ದೀರಾ ಎಂದರೆ ಇಲ್ಲ.

9. ದಾವಾ ಐಟಂ ನಂ.1ರ 2 ಎಕರೆ ಪೈಕಿ ನೀವು ಸ್ವಾಧೀನದಲ್ಲಿರುವ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ ರಂಗಯ್ಯ ಬಿನ್ ಹನುಮನಾಯಕ್ ರವರ ಜಮೀನು, ಪಶ್ಚಿಮಕ್ಕೆ ಕಾಳಮಾರಯ್ಯ ನಾರಾಯಣಪ್ಪ ರವರ ಜಮೀನು, ಉತ್ತರಕ್ಕೆ ಶಿವಮರಿಯಯ್ಯರವರ ಜಮೀನು, ದಕ್ಷಿಣಕ್ಕೆ ಖಾಲಿ ಭೂಮಿ ಇದೆ. ಸರ್ವೇ

ನಂ.241/7ರ 15 ಗುಂಟೆ ಪೈಕಿ ನೀವು ಸ್ವಾಧೀನದಲ್ಲಿರುವ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ ರಸ್ತೆ ಹುಚ್ಚಮ್ಮನ ದೇವಸ್ಥಾನ, ಪಶ್ಚಿಮಕ್ಕೆ ಕಾಳಮಾರಯ್ಯರವರ ಜಮೀನು ಇದೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.